ಅ) 4 ತಿಂಗಳ ಅವಧಿಯಲ್ಲಿ ಸೇತುವೆ ಕಾಮಗಾರಿ ಕೆಲಸ ಪೂರ್ಣಗೊಳಿಸಲಾಗುವುದು.

ಇ) ಹೌದು. ಜೂನ್ 1999ರ ಒಳಗೆ ಮುಗಿಸಲು ಉದ್ದೇಶಿಲಾಗಿದೆ.

ಮಡಿಕೇರಿ ತಾಲ್ಲೂಕಿನ ಕೊಪ್ಪಟಿಯ ಸರ್ಕಾರಿ ಅರಣ್ಯ ಅಕ್ರಮವಾಗಿ ಕಡಿಯಲಾದ ಬಗ್ಗೆ

573 (605)ಶ್ರೀ ಡಿ.ಎಸ್.ಮಾದಪ್ಪ (ಮಡಿಕೇರಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಡಿಕೇರಿ ತಾಲ್ಲೂಕಿನ ಕೊಪ್ಪಟಿಯ ಸರ್ಕಾರಿ ಅರಣ್ಯದಲ್ಲಿ ಅಕ್ರಮವಾಗಿ ಕಡಿಯಲಾದ ಮರಗಳ ಮೌಲ್ಯವೆಷ್ಟು ?

ಆ) "ಅಕ್ರಮ ಮರ ಕಡಿತಲೆ"ಯ ಈ ಪ್ರಕರಣದ ತನಿಖೆಯು ಈಗ ಯಾವ ಹಂತದಲ್ಲಿದೆ ?

ಇ) ಅಪರಾಧಿ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು? ಅಪರಾಧಿಯಿಂದ ಆ ಬಗ್ಗೆ ಸರ್ಕಾರ ವಸೂಲು ಮಾಡಿದ ಮರದ ಮೌಲ್ಯ ಮತ್ತು ದಂಡ ಎಷ್ಟು ?

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು) :

ಅ) ರೂ. 1,77,63,172.00

ಆ) ಅಕ್ರಮ ಮರಗಳ ಕಡಿತಲೆಯ ಈ ಪ್ರಕರಣದ ತನಿಖೆಯನ್ನು ದಿನಾಂಕ : 13.8.98ರ ಸರ್ಕಾರಿ ಆದೇಶ ಸಂಖ್ಯೆ ಓಡಿ- 130-ಸಿಓಡಿ-98ರಮೇರೆಗೆ ಸಿಓಡಿಗೆ ಒಪ್ಪಿಸಿದೆ ಮತ್ತು ತನಿಖಾ ಕಾರ್ಯ ಜಾರಿಯಲ್ಲಿದೆ.

ಇ) ಅಕ್ರಮ ಮರ ಕಡಿತಲೆಗೆ ಕಾರಣರಾದ ಶ್ರೀಮತಿ ಡೈಸಿ ಜಾಕೋಬ್‌ರವರಿಂದ ಅರಣ್ಯ ಇಲಾಖೆಗೆ ಉಂಟಾಗಿರುವ ನಷ್ಟವನ್ನು ತುಂಬುವಂತೆ ದಿನಾಂಕ : 26.9.98ರಂದು ನೋಟೀಸನ್ನು ಜಾರಿ ಮಾಡಲಾಗಿತ್ತು. ಪ್ರತಿಯಾಗಿ ದಿನಾಂಕ:6.10.98ರಂದು ಅವರು ಸರ್ಕಾರಕ್ಕೆ ಉತ್ತರ ನೀಡಿದ್ದಾರೆ. ಆದರೆ ನಷ್ಟವನ್ನು ತುಂಬಿರುವುದಿಲ್ಲ. ಆದ್ದರಿಂದ ಸರ್ಕಾರಕ್ಕೆ ಆದ ನಷ್ಟವನ್ನು ಶ್ರೀಮತಿ ಡೈಸಿ ಜಾಕೋಬ್ ಅವರಿಂದ ವಸೂಲು ಮಾಡುವ ಬಗ್ಗೆ ಸಿವಿಲ್ ದಾವೆ ಹೂಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕುಣಿಗಲ್ ವಿಧಾನಸಭಾ ಕ್ಷೇತ್ರದ ಕೆ.ಕೆ.ರಸ್ತೆ ದುರಸ್ತಿಯಲ್ಲಿ ವಿಳಂಬ

576 (1004) ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಣಿಗಲ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿ ಯಲ್ಲಿ ಬರುವ ಕೆ.ಕೆ.ರಸ್ತೆಯನ್ನು ಅಗಲಗೊಳಿಸಲು 1996-97ನೇ ಸಾಲಿನಲ್ಲಿ ಶಾಸಕರ ಅನುದಾನ ಒದಗಿಸಿದ್ದಾಗ್ಯೂ ಈ ಕಾರ್ಯ ವಿಳಂಬವಾಗಲು ಕಾರಣಗಳೇನು ?

ಆ) ಇದರ ನಿರ್ಮಾಣ ಈಗ ಯಾವ ಹಂತ ದಲ್ಲಿದೆ ?

ಇ) ಆ ಬಗ್ಗೆ ಒದಗಿಸಿರುವ ಅನುದಾನ ಸಂಪೂರ್ಣವಾಗಿ ಉಪಯೋಗವಾಗಿದೆಯೇ ?

ಶ್ರೀ ಉಮೇಶ್.ವಿ.ಕತ್ತಿ (ಲೋಕೋಪಯೋಗಿ ಸಚಿವರು) :

ಅ) ಈ ಕಾಮಗಾರಿಯನ್ನು ಗುತ್ತಿಗೆ ಆಧಾರದಮೇಲೆ ವಹಿಸಿಕೊಂಡಿದ್ದ ಮೊದಲನೇ ಗುತ್ತಿಗೆ ದಾರರು ನಿಗಧಿತ ಪ್ರಗತಿಯನ್ನು ನೀಡದಪ್ರಯುಕ್ತ ಟೆಂಡರ್ ಅನ್ನು ರದ್ದುಪಡಿಸಿ ಮರು ಟೆಂಡರ್ ಕರೆದು ಬೇರೆ ಗುತ್ತಿಗೆದಾರರಿಗೆ ಕಾಮಗಾರಿಯನ್ನು ವಹಿಸಿರುವುದರಿಂದ ಕೆಲಸವು ಪೂರ್ಣಗೊಳ್ಳಲು ವಿಳಂಬವಾಗಿರುತ್ತದೆ.

ಆ) ಜಲ್ಲಿ ಬಡಾವಣೆ ಕಾಮಗಾರಿಯು ಪೂರ್ಣಗೊಂಡಿದ್ದು, ಡಾಂಬರೀಕರಣ ಕೆಲಸದಲ್ಲಿ ಶೇಕಡಾ. 50ರಷ್ಟು ಭಾಗವು ಪೂರ್ಣಗೊಂಡು, ಉಳಿಕೆ ಕೆಲಸ ಪ್ರಗತಿಯಲ್ಲಿದೆ.

ಇ) ಆಗಿದೆ.

ನಬಾರ್ಡ್ ಯೋಜನೆಯಡಿ ಕುಣಿಗಲ್ ಕ್ಷೇತ್ರಕ್ಕೆ ಮಂಜೂರಾಗಿರುವ ಹಣ

577 (1006) ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಬಾರ್ಡ್ ಯೋಜನೆಯಡಿ ರಸ್ತೆಗಳು ಮತ್ತು ಸೇತುವೆಗಳ ಅಭಿವೃದ್ಧಿಗಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ನೀಡಿರುವ ಹಣವೆಷ್ಟು ?

ಆ) ಆ ರೀತಿ ನೀಡಿರುವ ಹಣದಲ್ಲಿ ತಾರತಮ್ಯವಾಗಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಸರ್ಕಾರ ಈ ತಾರತಮ್ಯವನ್ನು ಸರಿಪಡಿಸಲು ತೆಗೆದುಕೊಳ್ಳಲಿರುವ ಕ್ರಮ ಯಾವುವು?

ಶ್ರೀ ಉಮೇಶ್.ವಿ. ಕತ್ತಿ (ಲೋಕೋಪಯೋಗಿ ಸಚಿವರು) :

ಅ) ನಬಾರ್ಡ್ ಯೋಜನೆಯು ಕ್ಷೇತ್ರಾವಾರು ಕಾರ್ಯಕ್ರಮ ಅಲ್ಲ. ರಾಜ್ಯ ಸರ್ಕಾರವು ಪ್ರಸ್ತಾವಿಸಿದ ಕಾಮಗಾರಿಗಳನ್ನು ಪರಿಶೀಲಿಸಿ ನಬಾರ್ಡ್ ಸಂಸ್ಥೆಯ ನಿಯಮಾವಳಿಗೊಪ್ಪುವ ಕಾಮಗಾರಿಗಳಿಗೆ ನಬಾರ್ಡ್ ಸಂಸ್ಥೆಯು ಕಾಮಗಾರಿವಾರು ಮಂಜೂರಾತಿ ನೀಡುತ್ತದೆ.

ಆ) ಉದ್ಭವಿಸುವುದಿಲ್ಲ.

ಇ) ಎಲ್ಲಾ ಗ್ರಾಮೀಣ ಕ್ಷೇತ್ರಗಳಲ್ಲೂ ಕಾಮಗಾರಿಗಳನ್ನು ಪ್ರಸ್ತಾವಿಸಲು ಕ್ರಮ ಕೈಗೊಳ್ಳಲಾಗತ್ತಿದೆ.

ರಾಜ್ಯದಲ್ಲಿ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಮೊಕದ್ದಮೆಗಳು

578 (1007) ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಈಗ ಈಗ ಬಾಕಿ ಇರುವ ಮೊಕದ್ದಮೆಗಳ ಒಟ್ಟು ಸಂಖ್ಯೆ ಎಷ್ಟು (ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಮೊಕದ್ದಮೆಗಳು ಬಾಕಿ ಇವೆ ಎಂಬ ವಿವರಗಳನ್ನು ನೀಡುವುದು)

2) ಅವುಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಕೈಗೊಳ್ಳಲಾಗಿರುವ ಕ್ರಮಗಳೇನು ?